ಕೇಳುವವರು ಯಾರೂ ಇಲ್ಲವಾಯಿತು. ಅವನು ಚಟದಾಸನಾಗಿ ತನ್ನ ಬಂಗ್ಲೆ ಮತ್ತು ಸುತ್ತಮುತ್ತಲಿನ ಜಮೀನು ಮಾರಿ ಗೇಟಿನ ಬಳಿ ಇದ್ದ ಔಟ್ ಹೌಸಿನಲ್ಲಿ ನಶೆಯಲ್ಲಿ ಬಿದ್ದಿರುತ್ತಿದ್ದ.

ಸುಷಮಾಳ ತಾಯಿ ತನ್ನ ಕೊನೆಯ ದಿನದವರೆಗೆ ರಿಚಿ ಆಂಟಿಯ ಬಗ್ಗೆ ಬೆಂಗಳೂರಿನಲ್ಲಿದ್ದ ತನ್ನ ಪರಿಚಿತರಿಂದ ಮಾಹಿತಿ ಸಂಗ್ರಹಿಸುತ್ತಿದ್ದಳು. ಅವಳ ತಾಯಿ ಗತಿಸಿದ ಬಳಿಕ ಸುಷಮಾ ಮಾರ್ಕ್ ಎಲ್ಲಿದ್ದಾನೆ, ಹೇಗಿದ್ದಾನೆ ಎಂದು ತಿಳಿದುಕೊಳ್ಳಲು ಪ್ರಯತ್ನಿಸಿದರೂ ಫಲಕಾರಿಯಾಗಲಿಲ್ಲ. ಈಗ ಮಾರ್ಕ್ ಬದುಕಿರಲಿಕ್ಕಿಲ್ಲ, ಬದುಕಿದ್ದರೂ ಅವನ ಕೊನೆಯ ಗುರುತು ಔಟ್ ಹೌಸ್‌ನ್ನು ಮಾರಿ ಕುಡಿದು ಬೀದಿ ಬೀದಿಯಲ್ಲಿ ಅಲೆಯುತ್ತಿರಬೇಕು ಎಂದೆನಿಸುತ್ತದೆ.

ಬೆಂಚಿನ ಮೇಲೆ ಕುಳಿತ ಸುಷಮಾ ಯೋಚನಾ ಲೋಕದಿಂದ ಮರಳಿ ವಾಸ್ತವದ ಭೂಮಿಗೆ ಬಂದಾಗ ಅವಳ ಎದೆಬಡಿತ ಹೆಚ್ಚಾಗಿತ್ತು. ಅವಳು ನಿಟ್ಟುಸಿರು ಬಿಟ್ಟು ತನ್ನನ್ನು ತಾನೇ ನಿಯಂತ್ರಿಸಲು ಪ್ರಯತ್ನಿಸಿದಳು. ಅವಳ ಕಿವಿಗಳಲ್ಲಿ ಎಷ್ಟೋ ಯೋಜನ ದೂರದ ರಿಚಿ ಆಂಟಿಯ ಸುಮಧುರ ಧ್ವನಿ ಖಿನ್ನತೆಯ ಸ್ವರದಲ್ಲಿ ತೇಲಿ ಬರುತ್ತಿತ್ತು. 'ಕಂಟ್ರಿ ರೋಡ್ಸ್ ಟೇಕ್ ಮಿ ಹೋಂ... ಟೇಕ್ ಮಿ ಹೋಂ.'

ಸುಷಮಾಳ ಕಣ್ಣಿನಿಂದ ಧಾರಾಕಾರ ನೀರು ಹರಿಯುತ್ತಿತ್ತು. ಅವಳ ಎರಡೂ ಕೈಗಳು ಭಗವಂತನ ಪ್ರಾರ್ಥನೆಯಲ್ಲಿ ಒಂದಾಗಿ, 'ಹೆ ಪ್ರಭು, ನೀನು ಎಲ್ಲವನ್ನು ಕೊಟ್ಟೂ ರಿಚಿ ಆಂಟಿಗೆ ಕೊನೆಯ ದಿನಗಳಲ್ಲಿ ಪ್ರೀತಿ ಮತ್ತು ಮನಃಶಾಂತಿಯಿಂದ ಕೂಡಿದ ಬದುಕು ಕೊಡಲಿಲ್ಲ. ಇರಲಿ ಬಿಡು. ಈಗ ಅವಳು ನಿನ್ನ ಬಳಿ ಬಂದರೆ ಅವಳಿಗೆ ಆ ಅಮರ ಲೋಕದಲ್ಲಿ ಸುಖಶಾಂತಿಯಿಂದ ಕೂಡಿದ ಒಂದು ಸ್ಥಾನ ಅವಶ್ಯ ಕೊಡು, ಅಲ್ಲಿ ಅವಳ ಆತ್ಮ ಶಾಂತಿಯಿಂದ ನೆಮ್ಮದಿಯಿಂದ ಇರಲಿ' ಸುಷಮಾ ಕೈ ಜೋಡಿಸಿಕೊಂಡೇ ಇದ್ದಳು. ಅವಳ ಕಣ್ಣೀರು ನಿಂತಿರಲಿಲ್ಲ.

'ಅಜ್ಜೀ, ಇಷ್ಟು ತಲ್ಲೀನಳಾಗಿ ದೇವರಲ್ಲಿ ಏನು ಪ್ರಾರ್ಥಿಸುತ್ತಿದ್ದೀ? ಎಷ್ಟೊತ್ತಾಯ್ತು ನಾನು ನಿನ್ನ ಕೂಗ್ತಾ ಇದ್ದೀನಿ. ಮನೆಯ ಛತ್ತಿನಿಂದ ನೀನು ಇಲ್ಲಿ ಕೈಜೋಡಿಸಿಕೊಂಡು ಕೂತಿದ್ದು ನೋಡಿ ಓಡಿ ಬಂದೆ. ಬಾ ಹೋಗೋಣ – ಬಾ ತೋರಿಸ್ತೀನಿ ಏನು ಕಾಪಾಡಿ ಇಟ್ಟಿದ್ದೀನಿ ಅಂತ.' ರೀನಾಳ ಧ್ವನಿ ಕೇಳಿ ಸುಷಮಾ ಎಚ್ಚರಗೊಂಡಳು. ರೀನಾ ಅಜ್ಜಿ ಕೈಹಿಡಿದು ಎಳೆಯುತ್ತಿದ್ದಳು.

ಪಾರ್ಕ್ ಮತ್ತು ಅವಳ ಮಗಳ ಮನೆ ದೂರ ಇರಲಿಲ್ಲ. ನಡುವೆ ಒಂದು ರಸ್ತೆ ಮಾತ್ರ ಇತ್ತು. ರೀನಾ ಅಜ್ಜಿಯ ಕೈಹಿಡಿದು ಎಳೆದುಕೊಂಡು ತಮ್ಮ ಗ್ಯಾರೇಜಿಗೆ ಕರೆದೊಯ್ದಳು. ಅಲ್ಲಿ ರೀನಾ ತಂದಿಟ್ಟ 'ರೆಚೆಲ್ ಕಾಟೆಜ್' ಎಂದು ಬರೆದ ಮಾರ್ಬಲ್ ಫಲಕವಿತ್ತು. ಅದನ್ನು ಕೂಲಿಕಾರ ತನ್ನ ಸುತ್ತಿಗೆಯಿಂದ ಒಡೆಯಲು ಹೊರಟಾಗ ಅಲ್ಲಿರುವ ಗುತ್ತಿಗೆದಾರನಲ್ಲಿ ವಿನಂತಿಸಿ, ಆಳಿನ ಕೈಯಲ್ಲಿ ಹೊರೆಸಿ ಗ್ಯಾರೇಜಿನಲ್ಲಿ ತಂದಿರಿಸಿದ್ದಳು. ಡ್ರೈವರ್‌ನಿಂದ ಅದನ್ನು ತೊಳೆಸಿ, ಒರೆಸಿ ಲಕಲಕ ಮಿಂಚುವಂತೆ ಮಾಡಿಟ್ಟಿದ್ದಳು. ಒಂದೊಮ್ಮೆ ಅವಳು ಹೋಗದಿದ್ದರೆ ಕೂಲಿಯವ ಆ ಫಲಕ ಒಡೆದು ಚೂರು ಚೂರು ಮಾಡಿ ಮಣ್ಣಿನಲ್ಲಿ ಸೇರಿಸುತ್ತಿದ್ದ. ಆ ಫಲಕ ತೋರಿಸುತ್ತ ರಿನಾ ಅಜ್ಜಿಗೆ ಹೇಳಿದಳು, 'ನಾನು ತಪ್ಪು ಮಾಡಿದ್ನೆ?'

ಸುಷಮಾ ಅವಳನ್ನು ಪ್ರೀತಿಯಿಂದ ತಬ್ಬಿಕೊಂಡಳು. ಅವಳ ಕಣ್ಣುಗಳು ಆ ಕೂಲಿಕಾರರು ಏನು ಮಾಡುತ್ತಿದ್ದಾರೆಂದು ಹುಡುಕುತ್ತಿದ್ದಾಗ ಬೆಳಗ್ಗೆ ನೋಡಿದ ಅರ್ಧ ಕಂಬವೂ ಒಡೆದು ಮಣ್ಣಿನಲ್ಲಿ ಸೇರಿಸಿದ್ದು ಕಾಣಿಸಿತು. ರೆಚೆಲ್ ಕಾಟೆಜಿನ ಕೊನೆಯ ಅವಶೇಷವೂ ಕೆಳಕ್ಕೆ ಬಿದ್ದುದನ್ನು ಸುಷಮಾ ಕಣ್ಣಾರೆ ಕಂಡಿದ್ದಳು. ಅವಳು ರಿಚಿ ಆಂಟಿಯ ಸ್ವಪ್ನ ಮಹಲಿನ ಕೊನೆಯ ಸ್ತಂಭ ಒಡೆದುರುಳಿಸಿದ ದೃಶ್ಯದ ಸಾಕ್ಷಿಯಾಗಿದ್ದಳು.

ಮನೆಯ ಒಳಗೆ ಟ್ರೇನಿಂಗಿಗೆ ಹೋಗುವ ತಯಾರಿಯಲ್ಲಿ ತೊಡಗಿದ್ದ ಮಗಳು, 'ಏನಮ್ಮ, ಮಾತು ಮಾತಿಗೆ ನೀನು ಇಷ್ಟು ಸೆಂಟಿಮೆಂಟಲ್ ಏಕಾಗ್ತಿಯೋ ಗೊತ್ತಿಲ್ಲ. ನೀನಿರುತ್ತಿದ್ದ ನಿನ್ನ ಮನೆಯೂ